# ಎಂ. ಎಸ್. ಎಕ್ಸೆಲ್‌ನ ಚಟುವಟಿಕೆಯ ವಿಷಯ.

ಎಂ. ಎಸ್. ಎಕ್ಸೆಲ್ ಪ್ರಾರಂಭ ಮಾಡಲು ನಾವು ಮೊದಲು ಸ್ಟಾರ್ಟ್ ಬಟನ್ ಒತ್ತಿ ಎಕ್ಸೆಲ್ ಅನ್ನು ಓಪನ್ ಮಾಡಿಕೊಳ್ಳಬೇಕು. ನಂತರ ಎಕ್ಸೆಲ್‌ನಲ್ಲಿ ನಾವು ಕಾಲಮ್ಸ್ ಮತ್ತು ರೋಸ್ ತಿಳಿದುಕೊಳ್ಳಬಹುದು. ಅದರಲ್ಲಿ ನಾವು ಡೇಟಾ ಎಂಟ್ರಿ ಮಾಡಬಹುದು. ಆಫೀಸ್ ವರ್ಕ್ ಕೂಡ ಮಾಡಬಹುದು. ಹಾಗೆ ಅಂಕಪಟ್ಟಿಯನ್ನು ಬರೆಯಬಹುದು. ಅದರಲ್ಲಿ ಒಟ್ಟು ಅಂಕ, ಶ್ರೇಣಿ, ಫಲಿತಾಂಶ, ಗ್ರೇಡ್ ಎಲ್ಲವನ್ನೂ ಸೂತ್ರ ಉಪಯೋಗಿಸಿಕೊಂಡು ಕಲಿಯಬಹುದು. ಮತ್ತು ಎಕ್ಸೆಲ್‌ನಲ್ಲಿ ನಾವು ಏನಾದರೂ ವಸ್ತುಗಳನ್ನು ಖರೀದಿಸಿದರೆ ಅದನ್ನು ಕೂಡ ನಾವು ಬಿಲ್ ಹಾಕಬಹುದು. ನಾವು ಮನೆಯ ಖರ್ಚಿಗಾಗಿ ತಿಂಗಳ ಬಜೆಟ್ ಅನ್ನು ಕೂಡ ಹಾಕಬಹುದು. ಮನೆಯ ಬಾಡಿಗೆ , ಇನ್ನಿತರ ವಸ್ತುಗಳ ಖರೀದಿ ಹಾಗೂ ಇ, ಎಮ್, ಐ, ಈ ಎಲ್ಲವನ್ನೂ ಎಕ್ಸೆಲ್ ಸ್ಪ್ರೆಡ್ ಶೀಟ್‌ನಲ್ಲಿ ನಾವು ಬಿಲ್ ಹಾಕುವುದನ್ನು ಕಲಿಯಬಹುದು. ಆಸ್ಪತ್ರೆಗಳಲ್ಲಿಯೂ ಸಹ ಔಷಧಿಯ ಬಿಲ್, ರಿಜಿಸ್ಟ್ರೇಷನ್ ಕೂಡ ಮಾಡಲು ಈ ಎಕ್ಸೆಲ್‌ನಲ್ಲಿ ಮಾಡಬಹುದು. ಮುಂದಿನ ಎಲ್ಲ ವಿಷಯಗಳನ್ನು ನಾವು ಮಾಡಿರುವಂಥಹ ವಿಡಿಯೋವನ್ನು ನೀವು ಕೂಡ ನೋಡಿ ಕಲಿತುಕೊಳ್ಳಬಹುದು.